**ಪಿ.ಡಬ್ಲ್ಯೂ -1**

**ದಿನಾಂಕಃ 10-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃಆರೋಪಿಯ ಪರ ಶ್ರೀ.ಹೆಚ್.ಎನ್, ವಕೀಲರಿಂದಃ-**

**15.** ಸಾಮಾನ್ಯವಾಗಿ ಯಾರಿಗಾದರೂ ಸಾಲವನ್ನು ನೀಡಬೇಕಾದಾಗ ಅದರ ಭದ್ರತೆಗಾಗಿ ಪತ್ರವನ್ನು ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿಯು ತಾನು ಯಾವುದೇ ಪತ್ರವನ್ನು ಮಾಡಿಕೊಂಡಿಲ್ಲ ಎನ್ನುತ್ತಾರೆ. ನೀವು ಈ ಹಿಂದೆ ಪಾಟೀ ಸವಾಲಿನಲ್ಲಿ ಪರಿಚಯಸ್ತರಿಗೆ ಸಾಲವನ್ನು ನೀಡುತ್ತೇನೆ ಎಂದು ಹೇಳಿರುತ್ತೀರಾ ಮತ್ತು ಅದರ ಭದ್ರತೆಗಾಗಿ ನೀವು ಪತ್ರ ಮತ್ತು ಚೆಕ್ ಗಳನ್ನು ಪಡೆದುಕೊಳ್ಳುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 3 ರಿಂದ 4 ವರ್ಷಗಳ ಪರಿಚಯದ ನಂತರ ನಾನು ಬೇರೆಯವರಿಗೆ ಸಾಲವನ್ನು ಕೊಡುತ್ತೇನೆ. ನೀವು ಯಾವುದೇ ದಾಖಲೆಯನ್ನು ಪಡೆದುಕೊಳ್ಳದೇ ಬೇರೆಯವರಿಗೆ ಸಾಲವನ್ನು ನೀಡುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗೆ ರೂ. 12 ಲಕ್ಷ ಹಣವನ್ನು ನೀಡುವ ಸಮಯದಲ್ಲಿ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ನಾನು ಆರೋಪಿಗೆ ಹಣವನ್ನು ಕೊಡುವ ಸಮಯದಲ್ಲಿ ಅವರಿಗೆ ಸದರಿ ಹಣವನ್ನು ಮರುಪಾವತಿ ಮಾಡುವ ಸಾಮರ್ಥ್ಯ ಇದೆಯಾ ಎಂಬುವುದರ ಬಗ್ಗೆ ವಿಚಾರಿಸಿಯೇ ಹಣವನ್ನು ನೀಡಿರುತ್ತೇನೆ. ಆರೋಪಿಯ ಬಿಬಿಎಂಪಿ ಯಲ್ಲಿ ಗುತ್ತಿಗೆದಾರರಾಗಿ ಕೆಲಸವನ್ನು ಮಾಡುತ್ತಿದ್ದ ಕಾರಣ ನಾನು ಅವರಿಗೆ ಹಣವನ್ನು ನೀಡಿರುತ್ತೇನೆ. ಆರೋಪಿಗೆ ಸದರಿ ಗುತ್ತಿಗೆಯಿಂದ ಮಾಸಿಕವಾಗಿ ಎಷ್ಟು ಹಣ ಬರುತ್ತಿತ್ತು ಎಂಬುವುದರ ಬಗ್ಗೆ ನಾನು ತಿಳಿದುಕೊಂಡಿಲ್ಲ.

16. ನಾನು 2019 ನೇ ಇಸವಿಯಿಂದಲೂ ನನ್ನ ಮಗನ ಮದುವೆಗಾಗಿ ರೂ. 12 ಲಕ್ಷ ಹಣವನ್ನು ಇಟ್ಟುಕೊಂಡಿದ್ದೇನು. ಸದರಿ ಹಣದ ಪೈಕಿ ರೂ. 6 ಲಕ್ಷ ನನ್ನ ಬ್ಯಾಂಕ್ ಖಾತೆಯಲ್ಲಿ ಇತ್ತು ಮತ್ತು ಅದನ್ನು ನಾನು 2019 ನೇ ಇಸವಿಯಲ್ಲಿ ನಗದೀಕರಣ ಮಾಡಿರುತ್ತೇನೆ ಮತ್ತು ಉಳಿದ 6 ಲಕ್ಷ ನನ್ನ

ಕೈಯಲ್ಲಿಯೇ ಇತ್ತು. ನಾನು ಸದರಿ 6 ಲಕ್ಷ ಹಣವನ್ನು ನನ್ನ ಬ್ಯಾಂಕ್ ನಿಂದ ತೆಗೆದಿದ್ದೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸಾಮಾನ್ಯವಾಗಿ ರೂ. 12 ಲಕ್ಷ ನಗದನ್ನು ಯಾರೂ ಸಹ ಮನೆಯಲ್ಲಿ ಇಟ್ಟುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ತನ್ನ ಮಗನ ಮದುವೆ ನಿಶ್ಚಯ ಆಗುತ್ತದೆ ಎಂಬ ಉದ್ದೇಶದಿಂದ ಅಷ್ಟು ಹಣವನ್ನು ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದೇನೆ ಎನ್ನು ತ್ತಾರೆ. 2022 ನೇ ಇಸವಿಯಲ್ಲಿ ನನ್ನ ಮಗನ ಮದುವೆ ನಿಶ್ಚಯ ಆಗಿರುತ್ತದೆ. 2021 ನೇ ಇಸವಿಯಿಂದ ನಾನು ನನ್ನ ಮಗನಿಗೆ ಹೆಣ್ಣನ್ನು ನೋಡಲು ಶುರು ಮಾಡಿರುತ್ತೇನೆ. ನೀವು 2021 ನೇ ಇಸವಿಯಿಂದಲೇ ನಿಮ್ಮ ಮಗನಿಗೆ ಹುಡುಗಿಯನ್ನು ನೋಡಲು ಶುರು ಮಾಡಿರುತ್ತೀರಾ, ಆಗಾಗಿ 2019 ನೇ ಇಸವಿಯಲ್ಲಿ ನಿಮ್ಮ ಬಳಿ ಅಷ್ಟೊಂದು ಹಣ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

17. ದಿ.01-06-2021 ರಂದು ನಾನು ಆರೋಪಿಗೆ ರೂ. 12 ಲಕ್ಷ ಹಣವನ್ನು ನೀಡಿರುತ್ತೇನೆ. ಸದರಿ ವಿಷಯವನ್ನು ನೀವು ದೂರು, ನಿಪಿ-3 ಮತ್ತು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 2020 ನೇ ಇಸವಿಯ ಮಾರ್ಚ್ ತಿಂಗಳಿನಿಂದ 2021 ನೇ ಇಸವಿಯ ಜುಲೈ ತಿಂಗಳಿನ ವರೆಗೆ ಸರ್ಕಾರವು ಕೋವಿಡ್ ಪರಿಯಡ್ ಎಂದು ನಿಗದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅವಧಿಯಲ್ಲಿ ಸರ್ಕಾರವು ಸಾರ್ವಜನಿಕರ ಮೇಲೆ ಸಾಕಷ್ಟು ನಿಬಂಧನೆಗಳನ್ನು ಹಾಕಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅವಧಿಯಲ್ಲಿ ಮೂಲ ಸವಲತ್ತುಗಳನ್ನು ಹೊರತುಪಡಿಸಿ ಬೇರೆ ಎಲ್ಲಾ ವಿಷಗಳಿಗೂ ನಿರ್ಬಂಧನೆ ಇತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ಅವಧಿಯಲ್ಲಿ ಸಾಕಷ್ಟು ವ್ಯವಹಾರಗಳ ಮೇಲೆ ನಿರ್ಬಂಧನೆ ಇತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆ ಅವಧಿಯಲ್ಲಿ ಹೊಸದಾಗಿ ಯಾವುದೇ ವ್ಯವಹಾರವನ್ನು ಮಾಡಲು ಆಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಯಾವ ವ್ಯಾಪಾರವನ್ನು ಮಾಡಲು ಆರೋಪಿಯು ನಿಮ್ಮ ಬಳಿ ಹಣವನ್ನು ಕೇಳಿದ್ದರು ಎಂದರೆ ಸಾಕ್ಷಿಯು ಆರೋಪಿಯು ಬಿಬಿ ಎಂಪಿ ಯಿಂದ ತನಗೆ ಸಾಕಷ್ಟು ಸಾಲವಾಗಿದೆ ಮತ್ತು ಅದನ್ನು ತೀರಿಸುವ ಸಲುವಾಗಿ ತನ್ನ ಬಳಿ ಹಣವನ್ನು ಕೇಳಿದ್ದರು ಮತ್ತು ಸದರಿ ಹಣವನ್ನು ತನ್ನ ಮಗನ ಮದುವೆ ಸಮಯಕ್ಕೆ ನೀಡುತ್ತೇನೆ ಎಂದು ಹೇಳಿದರು ಎನ್ನುತ್ತಾರೆ. ಸದರಿ ವಿಷಯವನ್ನು ನಾನು ದೂರು, ನಿಪಿ-3 ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ. ದಿ.01-06-2021 ರಿಂದ ಆರೋಪಿಯು ನನಗೆ ಕೇವಲ 6 ತಿಂಗಳುಗಳ ಕಾಲ ರೂ. 12 ಲಕ್ಷಕ್ಕೆ ಬಡ್ಡಿಯನ್ನು ಪಾವತಿ ಮಾಡಿರುತ್ತಾರೆ. ಆರೋಪಿಯು ನನಗೆ ಶೇಕಡ ಒಂದುವರೆ ಪ್ರಸೆಂಟ್ ನಂತೆ ರೂ. 18 ಸಾವಿರವನ್ನು ಬಡ್ಡಿಯಾಗಿ ಪಾವತಿ ಮಾಡಿದ್ದಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**

**ಮಾಗಡಿ**